೨ನೇ ಸ್ವತಂತ್ರ ಕಿರಿಯ ಕಾಲೇಜು

೧೯೮೨–೮೩

೧೯೮೩–೮೪

೧೯೮೪–೮೫ ಬೈಲಹೊಂಗಲ ತಾಲ್ಲೂಕು–೧

೧	ಅಥಣಿ	೨೩	೯೪೮
೨	ರಾಯಬಾಗ್		೪೭೧
೩	ಚಿಕ್ಕೋಡಿ		೧೫೫೩
೪	ಹುಕ್ಕೇರಿ		೮೭೫
೫	ಬೆಳಗಾಂ		೧೪೮೮
೬	ಖಾನಾಪುರ		೫೧೪
೭	ಬೈಲಹೊಂಗಲ	೧೩೬	೧೦೦
೮	ಸೌದತ್ತಿ		೯೪೮
೯	ರಾಮದುರ್ಗ		೩೩೩
೧೦	ಗೋಕಾಕ್	೨೫	೩೪ ೧೦೬೩
	ಒಟ್ಟು	೨೫ ೫೫೬೬	೬೩೫೮೮ ೧೯೩ ೮೮೮೩

ಅ) ಎಲ್ಲಾ ಕಿರಿಯ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆ

ವರ್ಷ	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಒಟ್ಟು
೧೯೮೨–೮೩			
೧೯೮೩–೮೪	೧೨೬೩೯	೪೨೪೩	೧೬೯೮೨
೧೯೮೪–೮೫	೧೫೫೭೪	೫೧೯೨	೨೦೬೬೬

ಮಂನವಿಗಳನ್ನೊಪ್ಪಿಸುವುದು.

ಶ್ರೀ ಜಿ. ಎಸ್. ಆಚಾರ್ (ಕುಂದಾಪುರ).—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕಿನ ತಾರಾಪತಿ ಗ್ರಾಮಾಂತರ ರಸ್ತೆಯನ್ನು ಅಳಿವೆ ಕೋಡಿವರೆಗೆ ಮುಂದುವರಿಸುವ ಬಗ್ಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕು ಕಾಲ್ತೂಡು ಗ್ರಾಮದ ಕಬ್ಬಿ ಮತ್ತು ಶಾಂಬಳ್ಳಿ ಎಂಬಲ್ಲಿ ಕತ್ತಲೆ ಹೊಳೆಗೆ ಅಣೆಕಟ್ಟನ್ನು ನಿರ್ಮಿಸುವ ಬಗ್ಗೆ ಮನವಿಗಳನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು. —ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಬಸವರಾಜ್.—ದಕ್ಷಿಣ ಕನ್ನಡ ಜಿಲ್ಲೆ ಉಡುಪಿ ತಾಲ್ಲೂಕಿನ ಪಾಂಡೇಶ್ವರ ಮತ್ತು ಕುಮ್ರಗೋಡು ಗ್ರಾಮಗಳ ವ್ಯಾಪ್ತಿಯಲ್ಲಿ ಹರಿಯುವ ಮೊಬುಂಕಳ ಹೊಳೆಗೆ ಅಣೆಕಟ್ಟು ನಿರ್ಮಿಸುವುದರಿಂದ ಆಗುವ ತೊಂದರೆ ಕುರಿತು ಮನವಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.—ಮನವಿಯನ್ನು ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆ

ಹೇಮಾವತಿ ಎಡದಂಡೆ ನಾಲೆಯನ್ನು ವಿಂಚ್ಚಿರುವುದರಿಂದ ರೈತರಿಗುಂಟಾದ ತೊಂದರೆ

ಶ್ರೀ ಕೃಷ್ಣ —ಅಧ್ಯಕ್ಷರೇ, ನಾನು ಹೇಮಾವತಿ ಎಡದಂಡೆ ನಾಲೆ ವಿಂಚ್ಚಿರುವುದರ ಬಗ್ಗೆ ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಹೇಮಾವತಿ ಎಡದಂಡೆ ನಾಲೆ ೧೫೯ನೇ ಕಿಲೋಮೀಟರ್‌ನಲ್ಲಿ, ನಾಲೆಯು ಡೀಪ್ ಕಟ್‌ನಲ್ಲಿ ಹಾದು ಹೋಗುತ್ತದೆ. ಈ ವ್ಯಾಪ್ತಿಯಲ್ಲಿ ನಾಲೆಯು ಸಾಮಾನ್ಯ ಭೂಮಿ ಮಟ್ಟಕ್ಕಿಂತ ಸುಮಾರು ೧೬

ಮೀಟರ್‌ವರೆಗೂ ಆಗೆತ ಮಾಡಬೇಕಾಗಿರುವುದು. ಇದರಿಂದಾಗಿ ಗಟ್ಟಿ ಕಲ್ಲಿನಲ್ಲೇ ಆಗೆತ ಮಾಡುವ ಕೆಲಸ ಹೆಚ್ಚಳವಾಗಿರುತ್ತದೆ. ಚೈನೇಜ್ ೩೮೮.೦೦ ಕಿ.ಮೀ ನಿಂದ ೧೩೮.೮೫ ಕಿ.ಮಿ ವರೆಗೆ ಶ್ರೀ ವೆಂಕಟೇಶ್ವರ ಕನ್‌ಸ್ಟ್ರಕ್ಷನ್, ಗುತ್ತಿಗೆದಾರರಿಗೆ ಟೆಂಡರ್ ಪ್ರಕಾರ ೧೭-೮-೮೧ರಲ್ಲಿ ನೀಡಿಸಲಾಗಿದ್ದು ಗುತ್ತಿಗೆ ಕರಾರಿನ ಪ್ರಕಾರ ಆಗಸ್ಟ್ ೮೩ರ ವೇಳೆಗೆ ಕೆಲಸ ಪೂರ್ಣಗೊಳಿಸಬೇಕಾಗಿತ್ತು. ಗಟ್ಟಿ ಕಲ್ಲಿನಲ್ಲಿ ಆಗೆತ ಮಾಡುವ ಕೆಲಸದ ಪರಿಮಾಣ ಹೆಚ್ಚಳವಾಗಿದ್ದು ಮತ್ತು ಸ್ಫೋಟಕ ವಸ್ತುಗಳ ಅಭಾವ ಹಾಗೂ ಮತ್ತಿತರ ಕಾರಣಗಳಿಂದಾಗಿ, ಕೆಲಸವನ್ನು ಪೂರ್ಣಗೊಳಿಸಲಾಗಲ್ಲಿ. ಉಳಿದ ಕೆಲಸಗಳನ್ನು ಇದೇ ಗುತ್ತಿಗೆದಾರರಿಂದ ಮುಂದುವರಿಸಲಾಗಿದ್ದು ಜೂನ್ ೧೯೮೩ರ ಒಳಗೆ ಕೆಲಸವನ್ನು ಪೂರ್ಣಗೊಳಿಸಿ ನಾಲೆಯನ್ನು ೧೫೨ ಕಿ. ಮಿ. ವರೆಗೆ ಸೀದಾ ಮಾಡುವ ಉದ್ದೇಶವಿದೆ. ಆದರೆ ದಿನಾಂಕ ೧೯-೬-೮೫ ರಂದು ಈ ವ್ಯಾಪ್ತಿಯಲ್ಲಿ ಕೆಲಸವು ಪ್ರಗತಿಯಲ್ಲಿದ್ದಾಗ. ಸುಮಾರು ೧೪ ಮೀಟರ್ ಆಳತೆಯ ಭಾರಿ ಬಂಡೆಯು ಕುಸಿದು ನಾಲೆಗೆ ಅಡ್ಡವಾಗಿ ಬಂದ ಕಾರಣ ಉಳಿದ ಕೆಲಸಗಳನ್ನು ಮುಂದುವರಿಸಲು ಸಾಧ್ಯವಾಗಿಲ್ಲ. ಈ ಬಂಡೆ ಕುಸಿತವು ನಾಲೆಯ ಎಡ ಭಾಗದ ಇಳಿಜಾರು (ಸ್ಲೋಪ್) ಭಾಗದಲ್ಲಿ ಉಂಟಾಗಿರುತ್ತದೆ. ಇದೇ ರೀತಿ ಸೆಪ್ಟೆಂಬರ್ ಮೂಪೆಯಲ್ಲೂ ಕುಸಿತ ಉಂಟಾಗಿ ನಾಲೆಯ ವ್ಯಾಪ್ತಿ ೧೩೮.೦೦ ಕಿ. ಮೀ ಯಿಂದ ೧೩೮.೪೫ ಕಿ. ಮೀ ವರೆಗೆ ಆಡ್ಡವಾಗಿರುತ್ತದೆ.

ಸದರಿ ವಿಷಯದಲ್ಲಿ ತಾಂತ್ರಿಕ ಸಮಿತಿ (ಕಾವೇರಿ ಕೊಳ್ಳ) ಯೋಜನೆಗಳು ಮತ್ತು ಭಾರಿ ನೀರಾವರಿ ಯೋಜನಾ ನಿಯಂತ್ರಣಾ ಮಂಡಲಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸ್ಥಳಕ್ಕೆ ಆಗಸ್ಟ್ ೮೫ರಲ್ಲಿ ಭೇಟಿ ಮಾಡಿ ತಾಂತ್ರಿಕ ಸಲಹೆಗಳನ್ನು ನೀಡಿರುತ್ತಾರೆ. ಈ ವ್ಯಾಪ್ತಿಯಲ್ಲಿ ಇರುವ ಭೂಗರ್ಭ ರೂಪ ರೇಖೆಗಳು ಹಾಗೂ ಇದಕ್ಕೆ ಅನುಗುಣವಾಗಿ ನಾಲೆ ಇಳಿಜಾರಿನ ವಿನ್ಯಾಸದಲ್ಲಿ ಮಾಡಬೇಕಾದ ಮಾರ್ಪಾಟುಗಳನ್ನು ಅನುಸರಿಸಿ ಈ ಕುಸಿದ ಬಂಡೆಗಳ ಆಗೆತವನ್ನು ಮಾಡಲು ಹೊಸದಾಗಿ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನುಳಿದ ಬಾಕಿ ಕೆಲಸಗಳು ಅಂದರೆ ಮೂಲ ಗುತ್ತಿಗೆ ಕರಾರಿನ ಪ್ರಕಾರ ಶ್ರೀ ವೆಂಕಟೇಶ್ವರ ಕನ್‌ಸ್ಟ್ರಕ್ಷನ್ಸ್ ಇವರಿಂದಲೇ ನಿರ್ವಹಿಸಬೇಕಾಗಿರುವುದರಿಂದ. ಈ ಕುಸಿದ ಬಂಡೆಗಳ ಆಗೆತದ ಕೆಲಸಗಳನ್ನೂ ಸಹ ಇದೆ ಗುತ್ತಿಗೆದಾರರಿಗೆ ನಿರ್ವಹಿಸಬೇಕೆಂದು ಮುಖ್ಯ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ. ಪ್ರಸ್ತಾವ ಪರಿಶೀಲನೆಯಲ್ಲಿದೆ.

ನಾಲೆಯು ೧೨೬ ಕಿ. ಮೀ. ನಿಂದ ೧೫೨ ಕಿ. ಮೀ ವರೆಗೂ ಸದರಿ ವರ್ಷದಲ್ಲಿ ಅಂದರೆ ೧೯೮೬ನೇ ಇಸವಿ ಜೂನ್ ಅಂತ್ಯದ ವೇಳೆಗೆ ಕೆಲಸಗಳನ್ನು ಪೂರ್ಣಗೊಳಿಸಿ ಈ ವ್ಯಾಪ್ತಿಯ ನಾಲೆಯ ಅಡಿ ಭಾಗದಲ್ಲಿ ನೀರಾವರಿಯನ್ನು ಒದಗಿಸುವ ಕಾರ್ಯಕ್ರಮ ಹಾಕಿ ಕೊಳ್ಳಲಾಗಿದೆ, ತೀವ್ರಗತಿಯಲ್ಲಿ ಈ ಕೆಲಸಗಳನ್ನು ಪೂರ್ಣಗೊಳಿಸಿ ಕಾರ್ಯಕ್ರಮದಂತೆ ಕೆಲಸಗಳನ್ನು ನಿರ್ವಹಿಸುವ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಂಡು ಆದೇಶಗಳನ್ನು ನೀಡಲಾಗುವುದು ಮತ್ತು ಆದಷ್ಟು ಜಾಗ್ರತೆ ೧೯೮೬ನೇ ನೀರಾವರಿ ಸಾಲಿನಲ್ಲಿ ನೀರಾವರಿ ಸೌಲಭ್ಯವನ್ನೊದಗಿಸಲು ಸಂಪೂರ್ಣ ಪ್ರಯತ್ನ ಮಾಡಲಾಗುವುದು. ಸಧ್ಯದಲ್ಲಿ ಯಾವ ರೈತರಿಗೂ ತೊಂದರೆಯಾಗಿಲ್ಲ.

ಶ್ರೀ ಕೃಷ್ಣ.—ಮಾನ್ಯ ಅಧ್ಯಕ್ಷರೇ, ಹೇಮಾವತಿ ಎಡದಂಡೆ ನಾಲೆಯ ಕೆಲಸ ನಡೆಯುತ್ತಿರುವಾಗ ಬಂಡೆ ಕುಸಿದಿದೆ ಎಂದು ಮಾನ್ಯ ಮಂತ್ರಿಯವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಅದು ಯಾವ ದಿನ ಕುಸಿಯಿತು ? ತಾಂತ್ರಿಕ ಸಲಹಾ ಸಮಿತಿಯವರು ಇದರ ಬಗ್ಗೆ ಪರಿಶೀಲನೆ ಮಾಡಿದ್ದಾರೆಯೇ ? ಮಾನ್ಯ ಮಂತ್ರಿಯವರೂ ಸಹ ಇಲ್ಲಿ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ ಎಂದು ನನಗೆ ತಿಳಿದಿದೆ. ತಾಂತ್ರಿಕ ಸಲಹಾ ಸಮಿತಿಯವರು ಈ ಬಂಡೆಯನ್ನು ಯಾವಾಗ ಹೊರಕ್ಕೆ ತೆಗೆಯುವುದಕ್ಕೆ ಸಾಧ್ಯ ಎಂದು ತಿಳಿಸಿದರು ಎಂಬುದನ್ನು ಮಾನ್ಯ ಮಂತ್ರಿಯವರು ತಿಳಿಸಬೇಕು. ಈ ಕಾಲುವೆ ಸರಿಯಾಗಿ ರಿಪೇರಿ ಮಾಡಿದರೆ ನಮ್ಮ ತಾಲ್ಲೂಕಿನ ೩೦ ಸಾವಿರ ಎಕರೆಗೆ ನೀರಾವರಿ ಸೌಲಭ್ಯ ಸಿಗುತ್ತದೆ. ಈ ಕೆಲಸ ಇನ್ನೂ ಆಗದೇ ಇರುವುದರಿಂದ ನಮ್ಮ ಕ್ಷೇತ್ರದ ಜನತೆಗೆ ನಾವು ಮುಖ ತೋರಿಸುವ ಹಾಗಿಲ್ಲ. ಮಾನ್ಯ ಮಂತ್ರಿಯವರು ಇದರ ಬಗ್ಗೆ ನಿಷ್ಕ್ರಿಯರಾಗಿದ್ದಂತೆ ಕಾಣುತ್ತದೆ. ಆದೂ ಅಲ್ಲದೇ ನಮ್ಮ ತಾಲ್ಲೂಕಿಗೆ ಬರಗಾಲ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಯವರು ಈ ಬಂಡೆಯನ್ನು ಯಾವಾಗ ತೆಗೆಸುತ್ತಾರೆ ಎಂಬುದನ್ನು ತಿಳಿಸಬೇಕು. ಇದರ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ನಾನು ಹೋಗಿ ಅಲ್ಲಿನ ಸ್ಥಳ ಪರಿಶೀಲನೆ ಮಾಡಿದ್ದೇನೆ. ನನ್ನ ಭಾಷೆಯಲ್ಲಿ ಹೇಳುವುದಾದರೆ ಅಲ್ಲಿ ಸಿಕ್ಕಿರತಕ್ಕಂತಹ ಸಾಯಿಲ್ ಪೆನಿದೆ ನಮ್ಮ ರಾಜ್ಯದಲ್ಲಿ ಇದು ನಮಗೆ ಹೊಸತು. ಬಹುಶಃ ಭಾರತದೇಶದಲ್ಲಿ ಬೇರೆ ಕಡೆಗಳಲ್ಲಿ ಎಲ್ಲಿಯಾದರೂ ಈ ರೀತಿಯಲ್ಲಿ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಇಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಒಂದು ಬಂಡೆಯ ಪೇಲೆ ಮತ್ತೊಂದು ಬಂಡೆ ಕಖಿತಿರತಕ್ಕಂತಹದ್ದನ್ನು ನೋಡಬಹುದು. ಈಗಲೂ ನೋಡಬಹುದು, ಇದೊಂದು ಹೊಸ ಅನುಭವ. ಅದಕ್ಕೋಸ್ಕರವಾಗಿ ಇಲಾಖೆಯ ಅನುಭವಸ್ಥರು, ಹಾಗೂ ಹೆಸರಾಂತ ಇಂಜಿನಿಯರ್ ಬಾಳೆಕುಂದ್ರಿಯವರು ಕೂಡಾ ಸ್ಥಳ ಪರಿಶೀಲನೆ ಮಾಡಿ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಕೆಲಸವನ್ನು ಗುತ್ತಿಗೆದಾರರಿಗೆ ಕೊಟ್ಟಿದ್ದು, ಆ ಕೆಲಸ ಆಗುವುದಕ್ಕಿಂತ ಮುಂಚೆ ಸ್ಲಿಪ್ ಆಗಿದೆ ಇದರಲ್ಲಿ ಇಲಾಖೆಯವರ ದೋಷವಾಗಲಿ, ಕಂಟ್ರಾಕ್ಟ್‌ದಾರರ ದೋಷವಾಗಲಿ ಇಲ್ಲ. This is the first of its kind in the history of Karnataka Irrigation Dept. ಅದರ ಮೇಲೆ ಸ್ಲಿಪ್ ಆಗಿರತಕ್ಕಂತಹದ್ದನ್ನು ರಿಮೂವ್ ಮಾಡದೇನೆ ಬೇರೆ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ರಯತ್ನಗಳನ್ನು ಈ ದಿಶೆಯಲ್ಲಿ ಮಾಡಿದ್ದಾರೆ. ಮೊದಲು ಸ್ಲಿಪ್ ಪೋರ್ಷನ್ ತೆಗೆಯಂ ಬೇಕು. ಅದಕ್ಕಾಗಿ ೪೦–೫೦ ಲಕ್ಷ ರೂಪಾಯಿಗಳ ಖರ್ಚು ಆಗಬಹುದು ಎಂದು ಒಂದು ಅಂದಾಜು ಇದೆ ಒಂದು ಹಂತದಲ್ಲಿ ಟೆಂಡರ್ ಕರೆಯೋಣ ಎಂದು ನಿರ್ಣಯ ತೆಗೆದುಕೊಂಡರೂ ಮೊದಲ ಕಂಟ್ರಾಕ್ಟರ್ ಹಳೆಯ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದರಲ್ಲಿ ಸ್ವಲ್ಪ complications ಇವೆ. ಇದೇ ಆಧಾರದ ಮೇಲೆಸ್ಲಿಪ್ ಪೋರ್ಷನ್ ತೆಗೆಯುವಂತಹ ವಿಚಾರದಲ್ಲಿಯೂ ಸಾಕಷ್ಟುಯತ್ನಗಳು ನಡೆದರೂ ಅದು ಸಮಸ್ಯೆಯಾಗಿ ಉಳಿದಿದೆ. ಆದರೆ ಯಾವುದೇ ಪರಿಸ್ಥಿತಿಯಲ್ಲಿ ಅದನ್ನು ಮಾಡದೇನೆ ಮುಂದೆ ನಾಲೆ ಮಾಡುವುದಕ್ಕೆ ಕಷ್ಟವಾಗುತ್ತದೆ ಕೆನಾಲಿನಲ್ಲಿ ೧೫೨೦೦ ಕಿ.ಮೀ.ವರೆಗೆ ಇರುವ ಪ್ರದೇಶಕ್ಕೆ ನೀರು ಹೋಗುವುದಿಲ್ಲ. ಇದು ಆಕಸ್ಮಿಕವಾಗಿ ನಡೆದಂತಹ ದುರ್ಘಟನೆ. ಅದನ್ನು ತ್ವರಿತವಾಗಿ ಪರಿಹರಿಸ ಬೇಕೆಂದು ಸರಕಾರದ ಮನಸ್ಸಿನಲ್ಲಿ ಇದೆ. ಆದರೆ ಕೆಲವು ನಿಯಮಗಳನ್ನು ಅನುಸರಿಸತಕ್ಕಂತಹ ಕಾಲದಲ್ಲಿ ವಿಳಂಬ ಆಗಿರುವುದು ಸತ್ಯ ಏಕೆಂದರೆ ೧೯–೬–೧೯೮೫ ರಿಂದ ಇಲ್ಲಿಯವರೆಗೆ ಅಂದರೆ ೮–೯ ತಿಂಗಳು ಅದನ್ನು ಪ್ರೊಸೆಸ್ ಮಾಡುವುದಲ್ಲಿ ಅನಿವಾರ್ಯವಾಗಿ ಕಾಲ ಹೋಗಿದೆ. ಸರಕಾರಕ್ಕೆ ಬಂದು ಕೂಡಾ ಎರಡೂವರೆ ತಿಂಗಳು ಆಗಿದೆ. ಯಾವುದೇ ಟೆಂಡರ್‌ಗಳನ್ನು ಬಳಿಯಲ್ಲಿ ಇಟ್ಟುಕೊಳ್ಳತಕ್ಕಂತಹ ಸ್ವಭಾವ ನನಗೆ ಇಲ್ಲ. ಇದನ್ನು ನಾನು ಹತ್ತು ಸಾರಿ ಹೇಳಿದ್ದೇನೆ, ಮುಂದೆಯೂ ಈ ಮಾತನ್ನು ಹೇಳುತ್ತೇನೆ. ಈ ಕುರಿತು ಆರ್ಥಿಕ ಇಲಾಖೆಯವರು ಕೇಳಿರತಕ್ಕಂತಹ ಕೆಲವು ವಿವರಣೆಗಳನ್ನು ನಾವು ಕೊಡಬೇಕಾಗಿರುತ್ತದೆ. ಸುಮಾರು ಎರಡುವರೆ ತಿಂಗಳು ಈ ಹಂತದಲ್ಲಿ ಸ್ವಲ್ಪ ವಿಳಂಬ ಆಗಿದೆ, ಈ ವಿಚಾರದಲ್ಲಿ ಇಷ್ಟನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಕೆಲಸ ಮಾಡದಿದ್ದರೆ ಮುಂದೆ ೧೨ ಸಾವಿರ ಎಕರೆಗೆ ಪೊಟೆನ್ ಶಿಯಲ್ ಏನು ಕ್ರಿಯೇಟ್ ಮಾಡಿದ್ದಾರೆ ಅದರಿಂದ ನಾಲೆಗೆ ನೀರು ಹೋಗತಕ್ಕಂತಹ ಸನ್ನಿವೇಶ ಏನು ಇದೆ ಈ ಒಂದು ಉಪಯೋಗ ರೈತರಿಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಇದನ್ನು ಜೂನ್ ಒಳಗೆ ಮಾಡಬೇಕೆಂದು ನಮ್ಮ ಪ್ರಯತ್ನ ಇತ್ತು. ಆದರೆ ಜೂನ್ ಒಳಗೆ ಮಾಡುವುದಕ್ಕೆ ಆಗಬಹುದೇ. ಎಂಬುದು ಪ್ರಶ್ನೆ ಈಗಾಗಲೇ ನಾವು ಮಾರ್ಚ್‌ನಲ್ಲಿ ಇದ್ದೇವೆ, ದೊಡ್ಡ ಪ್ರಮಾಣದಲ್ಲಿ ಕುಸಿದ ಮಣ್ಣನ್ನು ಹೊರಗೆ ಹಾಕಿ ನಾವು ನೀರನ್ನು ಬಹಳ ತ್ವರಿತವಾಗಿ ಬಿಡುತ್ತೇವೆ ಎನ್ನುವುದರ ಬಗ್ಗೆ ಅನುಮಾನ ಇದೆ I must express my inability at this stage ಸಮಯ ಸಾಕಷ್ಟು ಹೋಗಿದೆ ಆದರೂ ಇದರ ಬಗ್ಗೆ ಸರಕಾರ ಅತ್ಯಂತ ಶೀಘ್ರವಾಗಿ ನಿರ್ಣಯವನ್ನು ಮಾಡಬೇಕೆಂಬ ಅರಿವು ನಮಗಿದೆ. ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಆರ್ಥಿಕ ಇಲಾಖೆಯವರು ಕೇಳಿದ ಕೆಲವು ವಿವರಣೆಗಳನ್ನು ಕೊಟ್ಟಿದ್ದೇವೆ. ಮತ್ತು ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇವೆ. ಅಲ್ಲಿ ಸ್ವಲ್ಪ ವಿಳಂಬ ಆಗುತ್ತದೆ. ಆದರೆ ಇಷ್ಟೇ ಹೇಳುತ್ತೇನೆ. ಆರ್ಥಿಕ ಇಲಾಖೆಯ ಕೆಲಸ ಬೇರೆ ನಾವು ನಿರ್ಣಯವನ್ನು ಮಾಡುವಾಗ ಕೆಲಸ ಆಗಬೇಕೆಂದು ನಮ್ಮ ಮುಖ್ಯ ಗುರಿಯಾಗಿರುತ್ತದೆ. ಗುಪಾಸ್ಥರು ಬರೆಯುವ ಕೆಲಸ ತಕರಾರುಗಳನ್ನು ಎತ್ತಿಹಿಡಿಯುವುದಕ್ಕೆ ನನಗಂತೂ ಮನಸ್ಸಾ ಸಮಾಧಾನ ಇಲ್ಲ. ಇದರ ಬಗ್ಗೆ ನಾವು ಅಂತಿಮವಾಗಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬಹುದು.

ಶ್ರೀ ಕೃಷ್ಣ.—ಮಾನ್ಯ ಸಚಿವರು ಅತಿ ಜಾರಿಕೆಯ ಉತ್ತರವನ್ನು ಕೊಟ್ಟಿದ್ದಾರೆ ಏಕೆಂದರೆ ಇಲ್ಲಿ ಸುಮಾರು ೨೦ ಸಾವಿರ ಎಕರೆ ನೀರಾವರಿ ಆಗುತ್ತದೆ. ಇದು ಸ್ಲಿಪ್ ಆಗಿ ೬—೭ ತಿಂಗಳು ಆಗಿದೆ.

ಇಷ್ಟೊಂದು ನಿಧಾನಕ್ಕೆ ಕಾರಣ ಏನು ಎಂದು ನನಗೆ ಅರ್ಥವಾಗುತ್ತಿಲ್ಲ. ತಾಂತ್ರಿಕವಾದ ಕೆಲವು ಮಾಹಿತಿಗಳನ್ನು ಪಡೆಯಲು ನಿಧಾನವಾಗಿದೆ ಎಂಬ ಸಣ್ಣ ಕಾರಣಕ್ಕೋಸ್ಕರ ನಿಧಾನ ಮಾಡುವುದರಲ್ಲಿ ಅರ್ಥವಿಲ್ಲ. ಟೆಂಡರ್ ಕರೆಯುವಾಗ ಒಂದು ಲಕ್ಷ ರೂಪಾಯಿಗಳು ಅತ್ತ ಇತ್ತ ಆಗಬಹುದು. ಆದರೆ ಈ ಕೆಲಸದ ಕಾರಣ ಅದೆಷ್ಟು ಜನರಿಗೆ ಅತ್ಯಂತ ಉಪಯುಕ್ತತೆ ಆಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅದಕ್ಕೆಲ್ಲ ಇಷ್ಟು ದೀರ್ಘವಾಗಿ ಯೋಚಿಸಿದರೆ, ಅಭಿವೃದ್ಧಿ ಕಾರ್ಯಗಳ ವಿಳಂಬ ನೀತಿಯಿಂದ ಸರಕಾರಕ್ಕೂ ಹಾಗೂ ಮಾನ್ಯ ಸಚಿವರಿಗೂ ಒಳ್ಳೆಯ ಹೆಸರು ಬರುವುದಿಲ್ಲ. ನಾವಂತೂ ಕ್ಷೇತ್ರದಲ್ಲಿ ಜನರ ಮಧ್ಯೆ ತಿರುಗಾಡಲಿಕ್ಕೆ ಬರುವುದಿಲ್ಲ. ಆದುದರಿಂದ ಖಚಿತವಾಗಿ ಈ ಕುರಿತು ಉತ್ತರವನ್ನು ಮಾನ್ಯ ಮಂತ್ರಿಯವರಿಂದ ಬಯಸುತ್ತೇನೆ, ಆ ಕೆಲಸವನ್ನು ಯಾವಾಗ ಮುಗಿಸಿಕೊಡುತ್ತೀರಿ ಎಂದು ಒಂದು ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಕೊನೆಯ ಪಕ್ಷ ಜೂನ್ ತಿಂಗಳಲ್ಲಿ ನೀರು ಕೊಡುವುದಕ್ಕೆ ಆಗದಿದ್ದರೆ ಜುಲೈನಲ್ಲಿ ಆಗಸ್ಟ್‌ನಲ್ಲಿ ನೀರಾದರೂ ಕೊಟ್ಟರೂ ಸಹ ಜನರಿಗೆ ರಾಗಿ, ಜೋಳ ಬೆಳೆಯಬಹುದಂತಹ ಅವಕಾಶ ಆಗುತ್ತದೆ. ೨೦ ಸಾವಿರ ಜನ ರೈತರು ಬಹಳ ಕಷ್ಟದಲ್ಲಿ ಇದ್ದಾರೆ. ಆದುದರಿಂದ ಏನಾದರೂ ಮಾಡಿ ಅವರಿಗೆ ಆಗಸ್ಟ್ ತಿಂಗಳಲ್ಲಿ ನೀರು ಕೊಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಒಂದು ಭರವಸೆಯನ್ನು ಪಡೆಯಲು ಇಚ್ಛೆ ಪಡುತ್ತೇನೆ.

ಶ್ರೀ ಎಚ್.ಡಿ ದೇವೇಗೌಡ.—ಮಾನ್ಯ ಸದಸ್ಯರಿಗೆ ಏನು ಭರವಸೆಯನ್ನು ಕೊಡುವುದು ಎಂದು ಗೊತ್ತಾಗುವುದಿಲ್ಲ. ಸ್ಲಿಪ್ ಆಗುತ್ತದೆ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ ನೀರಾವರಿ ಇಲಾಖೆಯಲ್ಲಿ ಇದೂ ಪ್ರಥಮ ಭಾರಿಗೆ ಆಗಿರತಕ್ಕಂತಹ ಘಟನೆ ನಾನೇನು ಈ ವಿಚಾರದಲ್ಲಿ ದೊಡ್ಡ ತಜ್ಞನೂ ಅಲ್ಲ. ನಮ್ಮ ಇಂಜಿನೀಯರ್‌ಗಳು, ತಜ್ಞರು ಹೇಳುತ್ತಾರೆ, ನಮ್ಮ ಇಲಾಖೆಯಲ್ಲಿ ಬಹಳಷ್ಟು ವರ್ಷಗಳ ಕಾಲ ಕೆಲಸ ಮಾಡಿ ಹೆಸರುವಾಸಿಯಾಗಿರತಕ್ಕಂತಹ ಅನುಭವಸ್ಥರು ಹೇಳುತ್ತಾರೆ. ೩೦-೩೫ ವರ್ಷಗಳ ಕಾಲ ಕೆಲಸ ಮಾಡಿದಂತಹ ಬಾಳೆಕುಂದ್ರಿಯವರು ಕೂಡಾ ನಮ್ಮಲ್ಲಿ ಮಾತ್ರ ಅಲ್ಲ, ಇತರ ರಾಜ್ಯಗಳಲ್ಲಿಯೂ ಈ ತರಹ ಆದುದು ಗೊತ್ತಿಲ್ಲ ಎಂದು ಹೇಳಿದ್ದಾರೆ. ನಾನು ಅವರನ್ನು ಕಳಂಹಿಸಿ ನಮಗೆ ಸೂಕ್ತ ಸೂಚನೆಯನ್ನು ಕೊಡಿ ಎಂದು ಕೇಳಿದ್ದೇನೆ. ನಾನು ಕೂಡ ಸ್ಥಳಕ್ಕೆ ಹೋಗಿ ಬಂದು ಪರಿಸ್ಥಿತಿಯನ್ನು ಪರಿಶೀಲನೆ ಮಾಡಿದ್ದೇನೆ. ಅದನ್ನೆಲ್ಲಾ ತೆಗೆದುಹಾಕುವುದಕ್ಕೆ ನನಗಂತೂ ಶಕ್ತಿ ಇಲ್ಲ. ಬಹಳ ದೊಡ್ಡ ಪ್ರಮಾಣದಲ್ಲಿ ಸ್ಲಿಪ್ ಆಗಿರುವುದನ್ನು ತೆಗೆದು ಹಾಕ ಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ ಇದನ್ನು ನಿರ್ಣಯ ಮಾಡುವಾಗ ಕೆಲವು ನ್ಯೂನತೆಗಳಿವೆ. ಈಗ ಕೊಟ್ಟಿರುವ ಕಂಟ್ರಾಕ್ಟರ್ ಕಡೆಯಿಂದ ಸೈಟನ್ನು ಹಾಂಡ್‌ಓವರ್ ಮಾಡಲಿಕ್ಕೂ ಆಗುವುದಿಲ್ಲ. ಅವರನ್ನು ಓಡಿಸಲಿಕ್ಕೂ ಆಗುವುದಿಲ್ಲ. ಈ ತರಹ ಕೆಲವು ನಿಯಮಗಳು ಇವೆ. ಅವುಗಳನ್ನು ಜಾರಿಗೆ ಮಾಡುವಾಗ ಸ್ವಲ್ಪ ವಿಳಂಬ ಆಗುವುದರ ಸಾಧ್ಯತೆ ಇದೆ. ಆದರೆ ನಮ್ಮ ಇಲಾಖೆಯವರು ತ್ವರಿತವಾಗಿ ಮಾಡುವ ಪ್ರಯತ್ನವನ್ನು ಮಾಡುತ್ತಾ ಇದ್ದಾರೆ, ಇದಕ್ಕಿಂತ ಮುಂದೆ ನಾನು ಏನು ಹೇಳಲಿ ? ವಿಸ್ತೀರ್ಣವು ೨೦ ಸಾವಿರ ಎಕರೆ ಆಗಬಹುದು, ಅಥವಾ ೧೫ ಸಾವಿರ ಆಗಬಹುದು. ಅದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ, ೧೫೯ ಕಿ.ಮೀ. ಕೆಲಸವು ಮುಗಿದು ಹೋಗಿದೆ. ಈಗ ೧೫-೨೦ ಸಾವಿರ ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯ ಇದೆ. ಳಿಖಿ ಕಿ.ಮಿ. ನಲ್ಲಿ ಎಂಬ್ಯಾರ್ ಕಟಿಂಗ್ ಬ್ಲಾಕ್ ಆಗಿದೆ. ಅದಕ್ಕೋಸ್ಕರವಾಗಿ ತೆಗೆದುಹಾಕುವುದಕ್ಕೆ ನಿರ್ಣಯಂವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ. ಸ್ವಲ್ಪ ಸರಕಾರಿ ಮಟ್ಟದಲ್ಲಿ ವಿಳಂಬ ಆಗುತ್ತದೆ. ನಮ್ಮ ಆರ್ಥಿಕ ಇಲಾಖೆಯವರು ಕೇಳ್ವುದು ಇದಕ್ಕೆ ನಾವು ಉತ್ತರವನ್ನು ಕೊಡುವುದು, ಇದರಲ್ಲಿ ವಿಳಂಬ ಆಗುತ್ತದೆ. ಈ ಕುರಿತು ಬೇಸರ ಇದೆ. ಸರಕಾರಕ್ಕೆ ಹೆಸರು ಬರಬೇಕೆಂದರೆ ಕೆಲಸಗಳು ಚುರುಕಾಗಿ ಆಗ ಬೇಕು, ನನ್ನ ಪ್ರಯತ್ನವನ್ನು ಈ ದಿಶೆಯಲ್ಲಿ ಮುಂದುವರೆಸುತ್ತೇನೆ. ಅತೀ ಆಸಕ್ತಿಯಿಂದ ಮುಂದುವರೆಸುತ್ತೇನೆ.

ಶ್ರೀ ಕೃಷ್ಣ.—ಅಧ್ಯಕ್ಷರೆ, ಖಚಿತವಾಗಿ ಮಾನ್ಯ ಸಚಿವರು ಏನೂ ಹೇಳಲಿಲ್ಲ. ನಮಗೆ ತ್ವರಿತವಾಗಿ ನೀರು ಕೊಡಿಸ ಬೇಕು...

ಅಧ್ಯಕ್ಷರು.—ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರವನ್ನು ಹೇಳಿದ್ದಾರೆ. ಇನ್ನೂ ತಮಗೆ ಏನಾದರೂ ತಿಳಿದುಕೊಳ್ಳ ಬೇಕಾದಲ್ಲಿ ಅವರನ್ನು ಬೇಟಿ ಮಾಡಿ, ಅಥವಾ ಅವರ ಪಕ್ಕದಲ್ಲಿ ಕುಳಿತು ಪಡೆದುಕೊಳ್ಳಿ.

ಶ್ರೀ ಕೃಷ್ಣ —ಸಣ್ಣ ಸಣ್ಣ ಕಾರಣಗಳಿಗೋಸ್ಕರವಾಗಿ ಹೀಗೆ ವಿಳಂಬ ಆದರೆ ಆರ್ಥಿಕ ಇಲಾಖೆಯವರಿಗೂ ಇವರಿಗೂ ಕೊಕ್ಕೆ-ಆರ್ಡಿನೇಶನ್ ಇಲ್ಲ ಎಂದು ಹೇಳಬೇಕಾಗುತ್ತದೆ. ನಮಗೆ ನಿರ್ದಿಷ್ಟವಾಗಿ ಯಾವ ತಿಂಗಳಲ್ಲಿ ನೀರು ಕೊಡುತ್ತೀರಿ ಎಂದು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ — ಈಗ ನಾನು ಇಷ್ಟು ಮಾತ್ರ ಹೇಳಬಲ್ಲೆ. ಮಾನ್ಯ ಸದಸ್ಯರಿಗೆ ಹೆಚ್ಚಿನ ಆಸಕ್ತಿ ತಮ್ಮ ಕ್ಷೇತ್ರದ ಬಗ್ಗೆ ಇರಬಹುದು ಆಲ್ಲಿ ನೀರು ಕೊಡಬೇಕೆನ್ನುವ ಆಸಕ್ತಿ ಸಹ ಇರಬಹುದು. ಆದರೆ ಸುಮಾರು ೧೫೯೦ರಿಂದ ೧೫೫೦ರವರೆವಿಗೆ ಎಲ್ಲಾ ಫೀಲ್ಡ್ ಕೆನಾಲ್ಸ್ ಮೈನ್ ಕೆನಾಲ್ಸ್ ಕೆಲಸ ಮುಗಿದಿದೆ. ಆವರೆ ಇಲ್ಲಿ ಸ್ಲಿಪ್ ಆಗಿರುವುದರಿಂದ ನೀರು ಮುಂದೆ ಹೋಗುವುದಕ್ಕೆ ಅವಕಾಶ ಇಲ್ಲ. ನೀರು ಕೊಡಬೇಕೆನ್ನುವುದು ಸರ್ಕಾರದ ಇಚ್ಚೆ ಸಹ ಇದೆ. ಆದರೆ ಈಗ ಇದಕ್ಕೆ ಸುಮಾರು ೪೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಲ್ಲಿ ಸ್ಲಿಪ್ ಆಗಿರುವುದನ್ನು ಬೇಕಾದರೆ ನನ್ನ ಜೊತೆಯಲ್ಲಿ ಮಾನ್ಯ ಅಧ್ಯಕ್ಷರೇ ಬಂದು ನೋಡಲಿ. ಅಥವಾ ಮಾನ್ಯ ಮುಖ್ಯಮಂತ್ರಿಗಳೇ ಬಂದ ಮೇಲೆ ಅವರನ್ನು ಸಹ ಕರೆದುಕೊಂಡು ಹೋಗಿ ತೋರಿಸಿ ಮಾತನಾಡೋಣ. ಏತಕ್ಕೆಂದರೆ ಅವರೇ ಹಣಕಾಸಿನ ಸಚಿವರಾಗಿರುವುದರಿಂದ ಅವರೂ ಸಹ ನೋಡಲಿ. ಜೊತೆಯಲ್ಲಿ ಬೇಕಾದರೆ ಮಾನ್ಯ ಸದಸ್ಯರು ಬರಲಿ, I can assure you that we are equally interested to see that this work is completed. ಬಹುಶಃ ಈ ಸಂದರ್ಭದಲ್ಲಿ ನಾನು ಇಷ್ಟು ಹೇಳಬಲ್ಲೆ. We are all there to cater the needs of the people and not to cater the needs of certain technical formalities. ರೂಲ್ಸ್‌ಗಳನ್ನು ತಡೆದಿಟ್ಟುಕೊಂಡು ನಾವು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣ ಅವರನ್ನೇ ಆ ಜಾಗಕ್ಕೆ ಕರೆದೂ ಕೊಂಡು ಹೋಗಿ ತೋರಿಸಿ ಚರ್ಚೆ ಮಾಡೋಣವೆನ್ನುವ ಆಶ್ವಾಸನೆಯನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಕೊಡಬಲ್ಲೆ.

(೨) ಪಟ್ಟಣ ಪ್ರದೇಶಗಳಲ್ಲಿ ಹೋಟೆಲುಗಳಲ್ಲಿ ತಿಂಡಿಗಳ ಬೆಲೆಯನ್ನು ಏರಿಸಿರುವುದು ಮತ್ತು ಗುಣಮಟ್ಟದ ಇಳಿಮುಖದ ಬಗ್ಗೆ.

ಶ್ರೀ ಎಸ್. ನಂಜಪ್ಪ.—ಮಾನ್ಯ ಅಧ್ಯಕ್ಷರೇ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಹೋಟೆಲ್‌ಗಳಲ್ಲಿ ತಿಂಡಿಗಳ ಬೆಲೆಯನ್ನು ಹೆಚ್ಚು ಮಾಡಿರುವುದರ ಜೊತೆಗೆ ಅದರ ಗುಣಮಟ್ಟ ಮತ್ತು ಗಾತ್ರದಲ್ಲಿ ಹೆಚ್ಚು ಕಡಿಮೆಯಾಗಿರುವ ಬಗ್ಗೆ ನಾನು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಮಾನ್ಯ ಅಧ್ಯಕ್ಷರೇ ನಾನು ಈ ಬಗ್ಗೆ ಒಂದು ಹೇಳಿಕೆಯನ್ನು ಕೊಡ ಬಯಸುತ್ತೇನೆ.

ಬೆಂಗಳೂರು ನಗರದ ಹೋಟೆಲುಗಳಲ್ಲಿ ಮತ್ತು ಜಿಲ್ಲಾ ಪ್ರದೇಶಗಳ ಹೋಟೆಲುಗಳಲ್ಲಿ ತಿಂಡಿ ಪದಾರ್ಥಗಳ ಬೆಲೆಯು ಸ್ವಲ್ಪ ಮಟ್ಟಿಗೆ ಏರಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಈ ವಿಷಯದಲ್ಲಿ ರಾಜ್ಯದ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಹೋಟೆಲು ಮಾಲೀಕರ ಸಭೆ ಕರೆದೂ ಚರ್ಚೆ ಮಾಡಿರುತ್ತಾರೆ. ಹೋಟೆಲು ಮಾಲೀಕರುಗಳು ತಮ್ಮ ಸಮಸ್ಯೆಗಳನ್ನು ವಿವರಿಸಿ, ಮಂಕ್ತ ಮಾರುಕಟ್ಟೆಯಲ್ಲಿ ಎಣ್ಣೆ ಬೆಲೆ, ಆಹಾರ ಪದಾರ್ಥಗಳ ಬೆಲೆ, ವಿದ್ಯುಚ್ಛಕ್ತಿ ಖರ್ಚು, ಕೂಲಿ, ತೆರಿಗೆ ಹಾಗೂ ಇತರ ಎಲ್ಲಾ ಬಾಬುಗಳಲ್ಲೂ ಬೆಲೆಗಳು ಏರಿದ್ದು, ಹೋಟೆಲು ಮಾಲೀಕರುಗಳಿಗೆ ಬಹಳ ತೊಂದರೆಯುಂಟಾಗಿದೆಯೆಂದೂ, ಆದಾಗ್ಯೂ ಮುಂದೆ ತಾವು ತಿಂಡಿ ಪದಾರ್ಥಗಳ ಬೆಲೆಯನ್ನು ಏರಿಸುವುದಿಲ್ಲವೆಂದು ಅವರು ಆಶ್ವಾಸನೆ ಕೊಟ್ಟಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಒಂದು ಸಮಿತಿಯನ್ನು ರಚಿಸಿ, ತಿಂಡಿ ಪದಾರ್ಥಗಳ ಬೆಲೆ ಏರಿಕೆಯನ್ನು ತಡೆಗಟ್ಟುವ ಬಗ್ಗೆ ಒಂದು ವರದಿಯನ್ನು ಕೊಡುವಂತೆ ಆದೇಶ ಹೊರಡಿಸಿದ್ದಾರೆ. ಈಗಾಗಲೇ ಸಮಿತಿಯು ಹೋಟೆಲು ಮಾಲೀಕರ ಜೊತೆ ಒಂದು ಸಭೆ ನಡೆಸಿ ಈ ವಿಷಯವನ್ನು ಚರ್ಚಿಸಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸಲು ಹೋಟೆಲು ಮಾಲೀಕರುಗಳಿಗೆ ತಿಳಿಸಲಾಗಿದೆ. ಮಾಹಿತಿ ಬೊರಕಿದ ನಂತರ ಮತ್ತೆ ಈ ವಿಷಯದಲ್ಲಿ ಮತ್ತೊಮ್ಮೆ ಹೋಟೇಲು ಮಾಲೀಕರುಗಳ ಜೊತೆ ಚರ್ಚಿಸಿ